**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.120/2025**

ಚಾ.ಸಾ. 1

ಪ್ರಾ.ಸಾ. 1

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 16.06.2026**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ.ಬಿ.ಸಮೀರ |
| ತಂದೆಯ ಹೆಸರು | : | ಮೊಹ್ಮಮ್ಮದ್ ತಯಿಬ್ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಮನೆ ಕೆಲಸ |
| ವಾಸ | : | ಮಂಡ್ಯ |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.2 ಅಮಿನ್ ಪಾಷ ನನ್ನ ಚಿಕ್ಕಮ್ಮನ ಮಗನಾಬೇಕು. ಚಾಸಾ.3 ರಿಂದ 5 ನಮ್ಮ ಪಕ್ಕದ ಮನೆಯವರು ಇರುತ್ತಾರೆ. ಚಾಸಾ.7 ಬಿ.ಬಿ.ಹಾಜಿರ ನನ್ನ ಅಕ್ಕ ಆಗಬೇಕು. ಚಾಸಾ.6 ತಯಿಬ್ ನನ್ನ ಗಂಡನಾಗಬೇಕು. ಮೃತ ಸಲಾ ಉದ್ದೀನ್ ನನಗೆ ಅಣ್ಣನಾಗಬೇಕು. ಆತನಿಗೆ ಮದುವೆಯಾಗಿರಲಿಲ್ಲ. ಆತನು ಬಾರ್ ಬೆಂಡಿಂಗ್ ಕೆಲಸ ಮಾಡುತ್ತಿದ್ದ. ಆತನು ಬೆಳಗ್ಗೆ 7.00 ಗಂಟೆಗೆ ಹೋದರೆ ಸಾಯಂಕಾಲ 6.30 ಗೆ ಬರುತ್ತಿದ್ದ. ಆತನು ಗಾಂಧಿನಗರದಲ್ಲಿ ಇರುವ ನಮ್ಮ ಮನೆಯಲ್ಲಿ ನಮ್ಮ ಜೊತೆ ವಾಸವಾಗಿದ್ದ.

2. ನಮ್ಮ ಅಣ್ಣ ಸಲಾಉದ್ದೀನ್ ಈಗ ತೀರಿಕೊಂಡಿರುತ್ತಾನೆ. ಈಗ್ಗೆ ಒಂದು ವರ್ಷದ ಹಿಂದೆ ಒಂದು ದಿನ ಚಾಸಾ.7 ರವರನ್ನು ಮಾತನಾಡಿಸಿಕೊಂಡು ಬರುತ್ತೇನೆ ಎಂದು ಹೇಳಿ ಸಂಜೆ 7.00 ಗಂಟೆಗೆ ಹೋಗಿರುತ್ತಾನೆ. ಆ ದಿನ ಭಾನುವಾರವಾಗಿದ್ದರಿಂದ ಆತ ಕೆಲಸಕ್ಕೆ ಹೋಗಿರಲಿಲ್ಲ. ಆತನು ಹೋಗಿ ವಾಪಾಸ್ಸು ಬಂದು ಮತ್ತೆ ಪುನಃ 8.00 ಗಂಟೆಗೆ ಹೋದನು. ಆ ಕಾಲಕ್ಕೆ ಚಾಸಾ.12 ರವರ ಮನೆಯಲ್ಲಿ ತನ್ನ ಮೊಬೈಲನ್ನು ಚಾರ್ಜ್ ಗೆ ಹಾಕಿ ಸ್ನೇಹಿತರ ಜೊತೆ ಮಾತನಾಡಲು ಹೋಗಿರುತ್ತಾನೆ.

3. ಹಾಗೆ ಹೋದವನು ಮತ್ತೆ ಮನೆಗೆ ಬಂದಿರುವುದಿಲ್ಲ. ಆತನು ಬರುತ್ತಾನೆ ಎಂದು ನಾವು ಸುಮ್ಮನೆ ಕುಳಿತಿದ್ದೆವು. ಮಧ್ಯರಾತ್ರಿ 1.00 ಗಂಟೆ ಸುಮಾರಿಗೆ ಚಾಸಾ.3 ರವರು ಬಂದು ಗಾಂಧಿನಗರದ 2 ನೇ ಕ್ರಾಸ್ ಬಳಿ ಸಲಾಉದ್ದೀನ್ ಬಿದ್ದಿದ್ದಾನೆ ಅಂತ ಹೇಳಿದರು. ನಾನು ಮತ್ತು ಚಾಸಾ.12 ರವರು ಅಲ್ಲಿ ಹೋಗಿ ನೋಡಲಾಗಿ ಸಲಾಉದ್ದೀನನು ಕುಳಿತ ಭಂಗಿಯಲ್ಲಿಯೇ ಇದ್ದು ಬಲಗಾಲಿನಲ್ಲಿ ರಕ್ತಸ್ರಾವವಾಗುತ್ತಿತ್ತು. ಆತನನ್ನು ನೋಡಲಾಗಿ ಮೃತಪಟ್ಟಿದ್ದನು.

4. ಆತನಿಗೆ ಯಾವ ರೀತಿಯಾಗಿ ಗಾಯವಾಗಿರುತ್ತದೆ ಎಂದು ಯಾರು ಹೇಳಿರುವುದಿಲ್ಲ. ಆ ಸಮಯದಲ್ಲಿ ಆರೋಪಿತರು ಇದ್ದರು. ಅವರನ್ನು ಕೇಳಲಾಗಿ ನಾವು ಏನು ಮಾಡಿಲ್ಲ ಅಂತ ಹೇಳಿದರು. ಆ ಸಮಯದಲ್ಲಿ ಆರೋಪಿತರಲ್ಲದೆ ತುಂಬಾ ಜನ ಇದ್ದರು. ನಂತರ ಪೊಲೀಸರು ಬಂದರು. ನಾನು ಬೆಳಗಿನ ಜಾವ 5.30 ಸುಮಾರಿಗೆ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ನಾನು ಈಗ ದೂರು ನೋಡುತ್ತಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

5. ನಂತರ ನಮ್ಮ ಅಣ್ಣನ ಸಾವಿನ ಬಗ್ಗೆ ಯಾವುದೇ ವಿಷಯ ಗೊತ್ತಾಗಿರುವುದಿಲ್ಲ. ಸಾಕ್ಷಿ ಮುಂದುವರೆದು 1 ನೇ ಆರೋಪಿಯು ತನ್ನ ಮನೆಯ ಬಳಿ ಗಲಾಟೆಯಾಗಿದ್ದು ಆತನ ಹೆಂಡತಿ 3 ನೇ ಆರೋಪಿಗೆ ನೀರು ಎರಚಿದ್ದು ಆಗ ಸಲಾ ಉದ್ದೀನನು ಮಧ್ಯ ಪ್ರವೇಶಿಸಿದ್ದು ಆಗ 2 ನೇ ಆರೋಪಿ ಚಾಕು ಎಸೆದಿದ್ದು ಅದು

ಸಲಾಉದ್ದೀನನ ಕಾಲಿಗೆ ತಾಗಿ ರಕ್ತಸ್ರಾವವಾಗಿ ಮೃತಪಟ್ಟಿದ್ದಾನೆ ಎಂದು ಹೇಳುತ್ತಾರೆ. ಸದರಿ ವಿಷಯವನ್ನು ನನ್ನ ಚಿಕ್ಕಮ್ಮ ಚಾಸಾ.12 ಹೇಳಿರುತ್ತಾರೆ.

6. ಈಗ ನಾನು ಒಂದು ಛಾಯಾಚಿತ್ರವನ್ನು ನೋಡುತ್ತಿದ್ದು ಅದರಲ್ಲಿರುವ ಚಾಕುವನ್ನು ಪೊಲೀಸರು ನನಗೆ ತೋರಿಸಿರುವುದಿಲ್ಲ. ಆರೋಪಿತರನ್ನು ಸ್ಥಳದಲ್ಲಿ ಅಲ್ಲದೆ ಬೇರೆ ಎಲ್ಲೂ ನೋಡಿರುವುದಿಲ್ಲ. ಪೊಲೀಸರು ದೂರು ಕೊಟ್ಟ ನಂತರ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಮೇಲ್ಕಂಡ ವಿಚಾರವಲ್ಲದೆ ಬೇರೆ ವಿಷಯ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

7. ದಿನಾಂಕ 03.08.2025 ರಂದು ರಾತ್ರಿ 11.00 ಗಂಟೆಗೆ ಮೃತ ಸಲಾಉದ್ದೀನನು ಮೊಬೈಲ್ ತೆಗೆದುಕೊಂಡು ಹೊರಗಡೆ ಹೋಗಿ ಬರುವುದಾಗಿ ಹೇಳಿ ಹೋದವನು ವಾಪಾಸ್ಸು ಬಂದಿರುವುದಿಲ್ಲ ಎಂದು ದೂರಿನಲ್ಲಿ ಹೇಳಿರುತ್ತೇನೆ ಎಂದರೆ ನಿಜ. ರಾತ್ರಿ 1.00 ಗಂಟೆಗೆ ಅಮಿರ್ ಪಾಷನು ಓಡುತ್ತಾ ಬಂದು ಗಾಂಧಿನಗರದ 2 ನೇ ಕ್ರಾಸ್ ಬಳಿ ಆರೋಪಿತರು ಸಲಾಉದ್ದೀನನ ಜೊತೆ ಜಗಳ ಮಾಡಿ ಹೊಡೆದು ಸಾಯಿಸಿರುವುದಾಗಿ ತಿಳಿಸಿರುತ್ತಾನೆ ಎಂದರೆ ನಿಜ.

8. ಸದರಿ ವಿಚಾರ ತಿಳಿದು ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಸಲಾಉದ್ದೀನನು ರಕ್ತದ ಮಡುವಿನಲ್ಲಿ ಬಿದ್ದಿದ್ದ ಎಂದರೆ ನಿಜ. ನಂತರ ನಾನು ಹೇಳಿದಂತೆ ಚಾಸಾ.4 ರವರು ದೂರು ಬರೆದುಕೊಟ್ಟಿರುತ್ತಾರೆ ಎಂದರೆ ನಿಜ. ನಂತರ ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ನಿಜ. ಮಾರನೆಯ ದಿನ ಬೆಳಗ್ಗೆ ಪೊಲೀಸರು 3 ಜನ

ಆರೋಪಿತರನ್ನು ಠಾಣೆಗೆ ಕರೆದುಕೊಂಡು ಬಂದಿದ್ದರು ಎಂದರೆ ನಿಜ. ಠಾಣೆಯಲ್ಲಿ ಪೊಲೀಸರು ಹೇಳಿದ್ದೇನೆಂದರೆ "ಆರೋಪಿತರು ಮಧ್ಯಪಾನ ಮಾಡಿಕೊಂಡು ಬಂದು 2 ನೇ ಆರೋಪಿಯ ಮನೆಯ ಬಳಿ ಬಂದಾಗ 1 ನೇ ಆರೋಪಿಯ ಹೆಂಡತಿ ಕುಡಿದು ಬಂದಿರುತ್ತಾರೆ ಎಂದು ನೀರು ಎರಚಿದರು ಎನ್ನುವ ಕಾರಣದಿಂದ ಒಬ್ಬರಿಗೊಬ್ಬರು ಗಲಾಟೆ ಮಾಡಿಕೊಳ್ಳುತ್ತಿದ್ದವರು, ನನ್ನ ಅಣ್ಣನನ್ನು ಸಾಯಿಸುವ ಉದ್ದೇಶದಿಂದ ಆತನನ್ನು ಓಡಿಸಿಕೊಂಡು ಹೋಗಿ ಈಗ ತೋರಿಸಲಾದ ನಿಪಿ.2 ಫೋಟೋದಲ್ಲಿರುವ ಚಾಕುವಿನಿಂದ ಹೊಡೆದು ಸಾಯಿಸಿರುತ್ತಾರೆ " ಎಂದು ಹೇಳಿರುತ್ತಾರೆ ಎಂದರೆ ನಿಜ. ಸದರಿ ಚಾಕುವಿನ ಛಾಯಾಚಿತ್ರವನ್ನು ತೋರಿಸಿರುತ್ತಾರೆ ಎಂದರೆ ನಿಜ.

9. ನಾನು ಠಾಣೆಯಲ್ಲಿ 3 ಜನ ಆರೋಪಿತರನ್ನು ಗುರುತಿಸಿ ಈಗ ಓದಿ ಹೇಳಿದಂತೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ನಿಜ. ಅಮಿರ್ ಪಾಷನು ಗಲಾಟೆಯನ್ನು ನೋಡಿ ನನಗೆ ಬಂದು ಹೇಳಿರುತ್ತಾನೆ ಎನ್ನುವ ವಿಷಯವನ್ನು ನನಗೆ ಗಾಬರಿಯಾಗಿದ್ದರಿಂದ ಮುಖ್ಯ ವಿಚಾರಣೆಯಲ್ಲಿ ಹೇಳಲಾಗಲಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಕಾರಣ ಪಾಟೀ ಸವಾಲನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಇ.

**(ಮಧ್ವೇಶ ಡಬೇರ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.